Off) +91(0821)2526301-353
(Fax) +91(0821) 2330166
E-mail: ceo_zp_mys@nic.in
admzpmys@gmail.com

ಜಿಲ್ಲಾ ಪಂಚಾಯತ್, ಮೈಸೂರು
ZILLA PANCHAYAT, MYSURU

ಸಂಖ್ಯೆ : ಇ-ಆಡಳಿತ/ಮೊಬೈಲ್ ಆ್ಯಪ್ 11/2015-16 ದಿನಾಂಕ : 5/01/2016

**ಪ್ರಥಮಾದ್ಯತೆ**

## ಸುತ್ತೋಲೆ

**ವಿಷಯ** : ಜಿಲ್ಲಾ ಪಂಚಾಯತ್ "ಮೈ-ಸೂರು" ಮೊಬೈಲ್ ಆ್ಯಪ್‌ಗೆ ಇಲಾಖೆಗಳ ಮಾಹಿತಿಗಳನ್ನು ಕಾಲೋಚಿತಗೊಳಿಸುವ ಬಗ್ಗೆ ಹಾಗು ದಾಖಲಾಗುವ ದೂರುಗಳನ್ನು ಸಕಾಲದಲ್ಲಿ ವಿಲೇವಾರಿ ಮಾಡುವ ಬಗ್ಗೆ.

**ಉಲ್ಲೇಖ** : ಈ ಕಚೇರಿ ಪತ್ರ ಸಮಸಂಖ್ಯೆ ದಿನಾಂಕ : 03/10/2015.

******

ಮೈಸೂರು ಜಿಲ್ಲಾ ಪಂಚಾಯತ್ ವತಿಯಿಂದ ರೂಪಿಸಲಾಗಿರುವ "ಮೈ-ಸೂರು" ಮೊಬೈಲ್ ಆ್ಯಪ್‌ನ್ನು ಮಾನ್ಯ ಮುಖ್ಯಮಂತ್ರಿಗಳು ದಿನಾಂಕ : 02/01/2016 ರಂದು ಲೋಕಾರ್ಪಣೆಗೊಳಿಸಿರುತ್ತಾರೆ. ಸರ್ಕಾರದ ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ಸಾರ್ವಜನಿಕರಿಗೆ ತಲುಪಿಸುವ ನಿಟ್ಟಿನಲ್ಲಿ **ಇದು ರಾಜ್ಯದಲ್ಲೇ ಪ್ರಥಮ ಪ್ರಯತ್ನವಾಗಿದ್ದು**, ಆ್ಯಪ್‌ನ್ನು ಅಭಿವೃದ್ಧಿಪಡಿಸಲು ಅಗತ್ಯ ಮಾಹಿತಿಗಳು ಮತ್ತು ಸಹಕಾರವನ್ನು ನೀಡಿದ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಮೈಸೂರು ಜಿಲ್ಲಾ ಪಂಚಾಯತ್ ವತಿಯಿಂದ ಆತ್ಮೀಯ ಅಭಿನಂದನೆಗಳನ್ನು ತಿಳಿಸಿದೆ.

"ಮೈ-ಸೂರು" ಮೊಬೈಲ್ ಆ್ಯಪ್‌ನ್ನು ಸಮರ್ಪಕವಾಗಿ ಬಳಸಿಕೊಂಡು, ಸಾರ್ವಜನಿಕರಿಗೆ ಸರ್ಕಾರದ ಯೋಜನೆಗಳ ಮಾಹಿತಿಗಳು ಮತ್ತು ಇತರೆ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ನಿರಂತರವಾಗಿ ಶ್ರಮಿಸಬೇಕಾದ ಅಗತ್ಯವಿರುತ್ತದೆ. ಆದ್ದರಿಂದ, ಎಲ್ಲಾ ಅಧಿಕಾರಿಗಳು ತಮ್ಮ ಮೊಬೈಲ್‌ನಲ್ಲಿ **"ಮೈ-ಸೂರು" ಮೊಬೈಲ್ ಆ್ಯಪ್** ನ್ನು www.mysuru.nic.in ಜಾಲತಾಣದಲ್ಲಿ ಅಳವಡಿಸಿರುವ **"ಮೈ-ಸೂರು" ಲಿಂಕ್ ಮೂಲಕ ಕಡ್ಡಾಯವಾಗಿ** Download ಮಾಡಿಕೊಳ್ಳಲು ತಿಳಿಸಿದೆ. ನಿಮ್ಮ ವ್ಯಾಪ್ತಿಯ ಎಲ್ಲಾ ಅಧೀನ ಸಿಬ್ಬಂದಿಗಳಿಗೂ ಸಹ ಮೊಬೈಲ್ ಆ್ಯಪ್‌ನ್ನು Download ಮಾಡಿಕೊಳ್ಳಲು ನಿರ್ದೇಶನ ನೀಡಲು ತಿಳಿಸಿದೆ.

ಮೊಬೈಲ್ ಆ್ಯಪ್‌ನಲ್ಲಿ ನಿಮ್ಮ ಇಲಾಖೆಗಳಿಂದ ಸ್ವೀಕರಿಸಲಾದ ಕಾರ್ಯಕ್ರಮಗಳು/ ಯೋಜನೆಗಳ ಮಾಹಿತಿಗಳನ್ನು ಅಳವಡಿಸಿದ್ದು, ಅದನ್ನು ಪರಿಶೀಲಿಸಲು ಹಾಗು ಬದಲಾವಣೆಗಳಿದ್ದಲ್ಲಿ, ಹೊಸ ಯೋಜನೆ/ ಕಾರ್ಯಕ್ರಮಗಳ ಮಾಹಿತಿಗಳು ಇದ್ದಲ್ಲಿ ಅದನ್ನು ಮೊಬೈಲ್ ಆ್ಯಪ್‌ನಲ್ಲಿ ಅಳವಡಿಸಲು **ಯುನಿಕೋಡ್‌ನಲ್ಲಿ** ಮಾಹಿತಿ ಸಿದ್ಧಪಡಿಸಿ, ಜಿಲ್ಲಾ ಪಂಚಾಯತ್ ಇ-ಮೇಲ್ ವಿಳಾಸ ceo_zp_mys@nic.in, admzpmys@gmail.com & karmys@nic.in ಕ್ಕೆ ಕಳುಹಿಸಲು ಮತ್ತು ಧೃಢೀಕೃತ ಪ್ರತಿಯನ್ನು ಜಿಲ್ಲಾ ಪಂಚಾಯತ್‌ಗೆ ಕಳುಹಿಸಲು ತಿಳಿಸಿದೆ.

ಮುಂದುವರೆದು, "ಮೈ-ಸೂರು" ಮೊಬೈಲ್ ಆ್ಯಪ್‌ನಲ್ಲಿ ಸಾರ್ವಜನಿಕರು ದೂರುಗಳನ್ನು ದಾಖಲಿಸಲು ಅವಕಾಶ ಕಲ್ಪಿಸಲಾಗಿದ್ದು, ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಪ್ರತಿದಿನ ಎರಡು ಬಾರಿ ಮೊಬೈಲ್ ಆ್ಯಪ್‌ನಲ್ಲಿ ದಾಖಲಾಗಿರುವ ದೂರುಗಳನ್ನು ಗಮನಿಸಿ, ತಮ್ಮ ಇಲಾಖೆಗಳಿಗೆ ಸಂಬಂಧಿಸಿದ ದೂರುಗಳಿದ್ದಲ್ಲಿ, ಕೂಡಲೇ ದೂರುಗಳ ಕುರಿತು ನಿಯಮಾನುಸಾರ ಕ್ರಮವಹಿಸಲು ತಿಳಿಸಿದೆ. ದೂರುಗಳನ್ನು ಪರಿಶೀಲಿಸಲು ಮತ್ತು ಕ್ರಮವಹಿಸಲು ಜಿ.ಪಂ. ವ್ಯಾಪ್ತಿಯ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಪ್ರತ್ಯೇಕ ಲಾಗಿನ್ ಮತ್ತು ಪಾಸ್‌ವರ್ಡ್‌ನ್ನು ಎನ್.ಐ.ಸಿ. ವತಿಯಿಂದ ನೀಡಲಾಗುವುದು ಹಾಗು ಈ ಕುರಿತು ಶೀಘ್ರದಲ್ಲೇ ತರಬೇತಿ ನೀಡಲಾಗುವುದು.

**ಮೊಬೈಲ್ ಆ್ಯಪ್‌ನಲ್ಲಿ ದಾಖಲಾಗುವ ದೂರುಗಳ ವಿಲೇವಾರಿ ಕುರಿತು ಮಾಸಿಕ ಕೆ.ಡಿ.ಪಿ. ಸಭೆಯಲ್ಲಿ ಪರಿಶೀಲಿಸಲಾಗುವುದೆಂದು ಮಾನ್ಯ ಅಧ್ಯಕ್ಷರು ತಿಳಿಸಿರುವುದರಿಂದ, ಈ ಬಗ್ಗೆ ಆದ್ಯತೆ ಮೇರೆಗೆ ಕ್ರಮವಹಿಸಲು ಮತ್ತೊಮ್ಮೆ ತಿಳಿಸಿದೆ.** ಈ ಬಗ್ಗೆ ನಿಮ್ಮ ವ್ಯಾಪ್ತಿಯ ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಅಗತ್ಯ ನಿರ್ದೇಶನ ನೀಡಲು ಹಾಗು

ತಮ್ಮ ಕಚೇರಿಯಲ್ಲಿ ಸಾರ್ವಜನಿಕ ಕುಂದುಕೊರತೆಗಳನ್ನು ನೋಡಿಕೊಳ್ಳುವ ವಿಷಯ ನಿರ್ವಾಹಕರು ಮತ್ತು ವ್ಯವಸ್ಥಾಪಕರಿಗೆ ಈ ಕುರಿತು ಜವಾಬ್ದಾರಿ ನೀಡಲು ತಿಳಿಸಿದೆ. (ಮಾನ್ಯ ಜಿಲ್ಲಾ ಪಂಚಾಯತ್ ಅಧ್ಯಕ್ಷರ ಪತ್ರಿಕಾ ಪ್ರಕಟಣೆ ಪ್ರತಿ ಲಗತ್ತಿಸಿದೆ) ಮೊಬೈಲ್ ಆ್ಯಪ್ ಕುರಿತು ನೀವು ತೆಗೆದುಕೊಂಡ ಕ್ರಮದ ಕುರಿತು ಈ ಕಚೇರಿಗೆ ವರದಿ ನೀಡಲು ತಿಳಿಸಿದೆ.

"ಮೈ-ಸೂರು" ಮೊಬೈಲ್ ಆ್ಯಪ್ ಪ್ರಯತ್ನವು ರಾಜ್ಯದಲ್ಲೇ ಪ್ರಥಮ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದು, ಈ ಬಗ್ಗೆ ಗ್ರಾಮೀಣ ಜನರಿಗೆ ಅರಿವು ಮೂಡಿದಲ್ಲಿ ಮಾತ್ರ ಈ ಪ್ರಯತ್ನವು ಯಶಸ್ವಿಯಾಗುತ್ತದೆ. ಆದ್ದರಿಂದ, ಈ ಕುರಿತು ಗ್ರಾಮೀಣ ಮಟ್ಟದಲ್ಲಿ ಮೊಬೈಲ್ ಆ್ಯಪ್ ಕುರಿತು ಅಗತ್ಯ ಪ್ರಚಾರ ಕೈಗೊಳ್ಳಲು ಸಂಬಂಧಿಸಿದವರಿಗೆ ಸೂಕ್ತ ನಿರ್ದೇಶನ ನೀಡಲು ತಿಳಿಸಿದೆ. ಜಿಲ್ಲಾ ಮಟ್ಟದ ಕಚೇರಿ ಮತ್ತು ತಾಲ್ಲೂಕು ಮಟ್ಟದ ಕಚೇರಿಗಳ ಸೂಚನಾಫಲಕದಲ್ಲಿ ಈ ಕುರಿತು ಮಾಹಿತಿಗಳನ್ನು ಅಳವಡಿಸಲು ತಿಳಿಸಿದೆ. ಪ್ರಚಾರದ ಕುರಿತು ಜಿಲ್ಲಾ ಪಂಚಾಯತ್ ವತಿಯಿಂದ ಪೋಸ್ಟರ್‌ಗಳನ್ನು ಸಿದ್ಧಪಡಿಸಿ, ನಿಮ್ಮ ಇಲಾಖೆಗಳಿಗೆ ವಿತರಿಸಲಾಗುವುದು.

"ಮೈ-ಸೂರು" ಮೊಬೈಲ್ ಆ್ಯಪ್‌ನ್ನು ಕಾಲೋಚಿತಗೊಳಿಸುವ ನಿಟ್ಟಿನಲ್ಲಿ ನಿಮ್ಮ ಹಾಗು ನಿಮ್ಮ ಅಧೀನ ಕಚೇರಿಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಸಲಹೆಗಳಿದ್ದಲ್ಲಿ, ಅದನ್ನು ದಾಖಲಿಸಿ ಜಿಲ್ಲಾ ಪಂಚಾಯತ್‌ಗೆ ನೀಡಲು ತಿಳಿಸಿದೆ. "ಮೈ-ಸೂರು" ಮೊಬೈಲ್ ಆ್ಯಪ್‌ನ್ನು ಮಾನ್ಯ ಮುಖ್ಯಮಂತ್ರಿಗಳು ಲೋಕಾರ್ಪಣೆ ಮಾಡಿರುವುದರಿಂದ, ಈ ಬಗ್ಗೆ ಇತರೆ ಸರ್ಕಾರಿ ಇಲಾಖೆಗಳು, ಸಾರ್ವಜನಿಕರು ಮತ್ತು ಮಾಧ್ಯಮದವರ ನಿರೀಕ್ಷೆ ಹೆಚ್ಚಾಗಿದ್ದು, ಅದಕ್ಕಾಗಿ ಯಾವುದೇ ಲೋಪದೋಷಗಳಿಲ್ಲದೇ ಹಾಗು ನಿರ್ಲಕ್ಷ್ಯತೆ ವಹಿಸದೇ ಈ ಬಗ್ಗೆ ಕಾರ್ಯನಿರ್ವಹಿಸಿ, ರಾಜ್ಯದಲ್ಲೇ ಮಾದರಿಯಾಗಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿರುತ್ತದೆ. ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲು ಸಂಬಂಧಪಟ್ಟವರಿಗೆ ತಿಳಿಸಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ್, ಮೈಸೂರು.

ಗೆ,

(1) ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಮಾಹಿತಿಗಾಗಿ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

(2) ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮಾಹಿತಿಗಾಗಿ ಕಳುಹಿಸುತ್ತಾ, ಈ ಬಗ್ಗೆ ತಮ್ಮ ವ್ಯಾಪ್ತಿಯ ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಅಗತ್ಯ ನಿರ್ದೇಶನ ನೀಡಲು ತಿಳಿಸಿದೆ.

(3) ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಸಂಬಂಧಿಸಿದ ಜಿಲ್ಲಾ ಮಟ್ಟದ ಅಧಿಕಾರಿಗಳ ಮೂಲಕ ಮಾಹಿತಿಗಾಗಿ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

(4) ಜಿಲ್ಲೆಯ ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಸಂಬಂಧಿಸಿದ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

ಪ್ರತಿಯನ್ನು,

(1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು , ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರುರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

(2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು , ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರುರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

(3) ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ವಿನೋಬಾ ರಸ್ತೆ, ಮೈಸೂರುರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

(4) ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರುರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

(5) ಜಿಲ್ಲಾ ಪಂಚಾಯತ್ ಕಚೇರಿಯ ಎಲ್ಲಾ ಶಾಖಾ ಮುಖ್ಯಸ್ಥರುಗಳಿಗೆ ಮಾಹಿತಿಗಾಗಿ.

(6) ಮಾಹಿತಿ ಅಧಿಕಾರಿಗಳು, ಎನ್.ಐ.ಸಿ., ಜಿಲ್ಲಾ ಪಂಚಾಯತ್, ಮೈಸೂರುರವರಿಗೆ ಮಾಹಿತಿಗಾಗಿ.

(7) ಕಚೇರಿ ಪ್ರತಿ.